# ಡಾಕ್ಟರ್ ಸಾಹೇಬ್



## ರಾಮಮನೋಹರ ಲೋಹಿಯಾ ಜೀವನಯಾನ

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ‘ಜನ ನನ್ನ ಮಾತನ್ನು ಕೇಳಿಸಿಕೊಳ್ಳುತ್ತಾರೆ; ಪ್ರಾಯಶಃ ನಾನು ಸತ್ತ ಮೇಲೆ...’



ಲೋಹಿಯಾ ತೀರಿಕೊಂಡ 12 ಅಕ್ಟೋಬರ್ 1967ರ ನಡುರಾತ್ರಿ ಅವರ ಸುತ್ತ ಯಾರೂ ಇರಲಿಲ್ಲ. ಇದಕ್ಕಿಂತ ಹತ್ತು ವರ್ಷಗಳ ಕೆಳಗೆ ಅಂಬೇಡ್ಕರ್ ನಡುರಾತ್ರಿ ತೀರಿಕೊಂಡಾಗ ಕೂಡ ಅವರ ಸುತ್ತ ಯಾರೂ ಇರಲಿಲ್ಲ ಎಂಬುದು ನೆನಪಾಗುತ್ತದೆ.

ಲೋಹಿಯಾ ತೀರಿಕೊಳ್ಳುವ ಮೂರು ದಿನಗಳ ಕೆಳಗೆ, ‘ನನ್ನನ್ನು ಮನೆಗೆ ಕರಕೊಂಡು ಹೋಗು’ ಎಂದು ರಮಾಗೆ ಹೇಳಿದ್ದರು. ಲೋಹಿಯಾ ಮರಳಿ ಮನೆಗೆ ಹೋಗಲೇ ಇಲ್ಲ.

ಲೋಹಿಯಾ ಗುಣವಾದ ತಕ್ಷಣ ಅವರನ್ನು ಭೇಟಿಯಾಗಬೇಕೆಂದು ಹಿಂದಿ ಲೇಖಕ ಮಸ್ತ್ರಾಂ ಕಪೂರ್ ನಿತ್ಯ ಆಸ್ಪತ್ರೆಯ ಬಳಿ ಕಾಯುತ್ತಿದ್ದರು. ಆ ದಿನ ಇನ್ನೆಂದೂ ಬರುವುದಿಲ್ಲವೆಂಬ ದುಗುಡದಲ್ಲಿ ಮಸ್ತ್ರಾಂ ಬರೆದರು:

‘ಮನೆಗೆ ಬಂದೆ. ಮಕ್ಕಳು ಕಾಣಲಿಲ್ಲ; ಹೊರಗೆ ಆಡುತ್ತಿದ್ದರು. ಹೆಂಡತಿ ಅಡುಗೆಮನೆಯ ಕೆಲಸದಲ್ಲಿದ್ದಳು. ನಾನು ಒಬ್ಬನೇ ಇದ್ದೆ. ಅಳು ಬಂತು. ನಾನು ಅಳುವುದನ್ನು ನೋಡಿ, ಹೆಂಡತಿ ‘ಏನಾಯ್ತು?’ ಎಂದಳು.

‘ಇನ್ನು ಮುಂದೆ ಲೋಹಿಯಾನ ನೋಡಲು ಆಗಲ್ಲ’ ಎಂದೆ. ಮಾತು ಹೊರಡಲಿಲ್ಲ. ನನ್ನ ಜೀವನದಲ್ಲಿ ಯಾರಾದರೂ ಸತ್ತಾಗ ಅತ್ತಿದ್ದು ನನಗೆ ನೆನಪಿರಲಿಲ್ಲ.’

ಮದ್ರಾಸಿನಲ್ಲಿದ್ದ ಸ್ನೇಹಲತಾ–ಪಟ್ಟಾಭಿರಾಮರೆಡ್ಡಿಯವರ ಮನೆಯಲ್ಲಿ ದುಃಖ ಕವಿಯಿತು. ಮದ್ರಾಸಿಗೆ ಬಂದಾಗ ಲೋಹಿಯಾ ಆ ಮನೆಯಲ್ಲಿ ಉಳಿಯುತ್ತಿದ್ದರು. ಪುಟ್ಟ ನಂದನಾ ತಾಯಿಗೆ ಹೇಳಿ ಬರೆಸಿದ್ದ ‘ಫ್ಲೈಯಿಂಗ್ ಹಾರ್ಟ್ ಅಂಡ್ ಅದರ್ ಪೊಯೆಮ್ಸ್’ ಸಂಕಲನದ ಕವಿತೆಗಳನ್ನು ಕುರಿತು ಲೋಹಿಯಾ ‘ಮ್ಯಾನ್‌ಕೈಂಡ್’ನಲ್ಲಿ ಬರೆದಿದ್ದರು. ಲೋಹಿಯಾ ನಿರ್ಗಮನದ ದಿನ ನಂದನಾಗೆ ಬಹು ಕಾಲ ನೆನಪಿತ್ತು:

‘ಮನೆಯಲ್ಲಿ ಕತ್ತಲಾವರಿಸಿತು. ನಾವು ನಮ್ಮ ಮನೆಮಂದಿಯೊಬ್ಬರನ್ನು ಕಳೆದುಕೊಂಡಿದ್ದೆವು. ಅಮ್ಮ ಅಳುತ್ತಿದ್ದರು; ಈ ಸಾವಿಗೆ ಕಾರಣವಾದ ಆಸ್ಪತ್ರೆಯ ಮೇಲೆ ಸಿಡಿಯುತ್ತಿದ್ದರು. ಅಪ್ಪ ಮೌನವಾಗಿ ಅಮ್ಮನನ್ನು ಸಮಾಧಾನ ಮಾಡುತ್ತಿದ್ದರು. ನನಗಾಗ ಹದಿನೈದು ವರ್ಷ. ದುಃಖ ಉಕ್ಕತೊಡಗಿತು.
ನಾನು ನನ್ನ ಸ್ನೇಹಿತನನ್ನು ಕಳೆದುಕೊಂಡಿದ್ದೆ.
ನನಗೆ ಗೊತ್ತಿದ್ದು ಕವಿತೆ ಬರೆಯುವುದಷ್ಟೇ.
ನನಗನ್ನಿಸಿದ್ದನ್ನು ಬರೆದೆ: